ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1464

ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 10-03-2022

ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸ	ಪ್ರಶ್ನೆ
ಅ	ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ವಯಂ ಪ್ರೇರಿತ ಜಾಗರೂಕತೆ ದಳಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಹಾಗಿದ್ದಲ್ಲಿ, ಈ ಪ್ರಕರಣಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು)
ಆ	ರಾಜ್ಯದಲ್ಲಿ ಇಂತಹ ಸ್ವಯಂ ಪ್ರೇರಿತ ಜಾಗರೂಕತೆ ದಳ ಮತ್ತು ನೈತಿಕ ಪೋಲೀಸಿಂಗ್ ಗುಂಪುಗಳಿಂದ ಪಶುವಧೆ ಮತ್ತು ಲವ್ ಜಿಹಾದ್ ಹೆಸರಿನಲ್ಲಿ ನಾಗರೀಕರನ್ನು ಹಿಂಸಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)
ಇ	ಇಂತಹ ಪ್ರಕರಣಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳುವಂತೆ ಆದೇಶಿಸಿರುವುದು ನಿಜವೇ? (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು)

ಉತ್ತರ

ಬಂದಿದೆ.

ರಾಜ್ಯದಲ್ಲಿ ಇಂತಹ ವ್ಯಕ್ತಿ/ ದಳಗಳಿಂದ ಪಶುವಧೆ ಮತ್ತು ಲವ್ ಜಿಹಾದ್ ಹೆಸರಿನಲ್ಲಿ ನಾಗರೀಕರನ್ನು ಹಿಂಸಿಸುತ್ತಿರುವ ಬಗ್ಗೆ ಕಳೆದ 03 ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ಘಟಕವಾರು ವಿವರ ಕೆಳಕಂಡಂತಿದೆ.

ಕ್ರಸ	ಘಟಕ	ಪಶುವಧೆ				ಲವ್ ಜಿಹಾದ್			
		2019	2020	2021	2022	2019	2020	2021	2022
1	ಮಂಗಳೂರು ನಗರ	1	1	1	0	0	0	0	0
2	ಚಿಕ್ಕಮಗಳೂರು	0	0	3	0	1	0	1	0
3	ದಕ್ಷಿಣ ಕನ್ನಡ	0	4	1		0	0	0	0
4	ಹಾಸನ	1	1	0	0	0	0	0	0
5	ಉ.ಕ.ಜಿಲ್ಲೆ	0	0	2	1	0	0	0	0
6	ಉಡುಪಿ	0	0	1	0	0	0	1	0
	ಒಟ್ಟು	**2**	**6**	**8**	**1**	**1**	**0**	**2**	**0**

- ಇಂತಹ ಪ್ರಕರಣಗಳು ದಾಖಲಿಸಿದ ನಂತರ ಸಂಬಂಧಪಟ್ಟ ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಯಾವುದೇ ಅನುಚಿತ ಪ್ರಭಾವಕ್ಕೆ ಮಣಿಯದೇ ಸೂಕ್ತ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ಸಾರ್ವಜನಿಕರ ಸುರಕ್ಷತೆಗಾಗಿ ಸ್ಥಾಯಿ ಆದೇಶ 1017 ಹಾಗೂ 1032ರ ರೀತ್ಯಾ ಸಮರ್ಪಕ ಬೀಟ್, ಚೆಕ್ ಪೋಸ್ಟ್, ಹೊಯ್ಸಳ ಬಳಸಿ ನಿಗಾವಹಿಸಲಾಗಿರುತ್ತದೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ರಾಜ್ಯಾದ್ಯಂತ ಮತೀಯವಾಗಿ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ ಕಿಡಿಗೇಡಿಗಳ ವಿರುದ್ಧ ಕಮ್ಯುನಲ್ ಗೂಂಡಾ ಶೀಟ್‌ಗಳನ್ನು ತೆರೆಯಲಾಗುತ್ತಿದೆ.
- ಪೊಲೀಸ್ ಇಲಾಖೆಯ ವತಿಯಿಂದ ಸಾಮಾಜಿಕ ಜಾಲತಾಣಗಳ ಮೇಲೆ ಸಹಾ ನಿಗಾ ಇರಿಸಿ ಅದರಲ್ಲಿ ಪ್ರಚೋದನಾಕಾರಿ ಪೋಸ್ಟ್‌ಗಳನ್ನು ಬಿತ್ತರಿಸುವವರ ಮೇಲೆ ಪ್ರಕರಣವನ್ನು ದಾಖಲಿಸಲಾಗುತ್ತಿದೆ.
- ಮತೀಯ ಅಂಶವುಳ್ಳ ಪ್ರತಿಯೊಂದು ಸಣ್ಣ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಮುದಾಯದ ಮುಖಂಡರನ್ನು ಒಟ್ಟುಗೂಡಿಸಿ ನಾಗರಿಕ ಸಮುದಾಯ ಶಾಂತಿ ಸಭೆಗಳನ್ನು ಪೊಲೀಸ್ ಠಾಣಾ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ಸಮಾಜದಲ್ಲಿ ಶಾಂತಿ ಕದಡುವ ಕೃತ್ಯ ಎಸಗುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಆರೋಪಿಗಳನ್ನು ದಸ್ತಗಿರಿ ಮಾಡಲಾಗುತ್ತಿದೆ.
- ಕಲಂ: 107 ಸಿಆರ್‌ಪಿಸಿ ರೀತ್ಯಾ ಸದರಿ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ.
- ಸಾರ್ವಜನಿಕ ಸುರಕ್ಷತಾ ಅಧಿನಿಯಮ-2018ರ ಅಡಿಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಾಗಳ ಅಳವಡಿಸುವುದು ಹಾಗೂ ಮುಂತಾದ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಂಖ್ಯೆ:ಹೆಚ್‌ಡಿ 102 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು